ಒಗ್ಗರಣೆಯನ್ನು ಹಾಕಿದೆ.

‘ತುಂಬಾ ರುಚಿಯಾಗಿದೆ!’ ಎನ್ನುತ್ತಾ ಎಲ್ಲವನ್ನೂ ತಿಂದ.

ನಂತರ ಸಮಯ ನೋಡಿ ತುಂಬಾ ಸೂಕ್ಷ್ಮವಾಗಿ ಹೇಳಿದೆ, ‘ಎಮಿಲಿಯ ಫೋನ್ ಬಂದಿತ್ತು...’

ಅವನ ಮುಖದಲ್ಲಿ ಶೂನ್ಯ ಆವರಿಸಿತು, ನಂತರ ರೇಗಿ ಕೇಳಿದ, ‘ಆ ಬಿಚ್... ಸೂಳೆ... ಏನ್ ಬೊಗಳಿದಳು?’

‘ಲಾರ್ಸ್...?’ ನಾನು ಅವನಿಗೆ ಹೇಳಿದೆ, ‘ಮೈಂಡ್ ಯುವರ್ ಲಾಂಗ್ವೇಜ್...’

‘ಸರಿ ಸರಿ, ಅವಳೇನು ಹೇಳಿದಳು?’

‘ಬಹಳಷ್ಟನ್ನು ಹೇಳಿದಳು. ಆದರೆ ಅವಳು ಫೋನ್ ಮಾಡಿದ ಮುಖ್ಯ ಉದ್ದೇಶ, ಅವಳ ಮನೆ ಮಾಲೀಕ ಅವಳಿಗೆ ಕಾಟ ಕೊಡುತ್ತಿದ್ದಾನಂತೆ... ಅವಳು ನಿಮ್ಮ ಸಹಾಯವನ್ನು ಬಯಸುತ್ತಿದ್ದಾಳೆ.’

‘ಅವನು ಕಾಟ ಕೊಡುತ್ತಿರುವುದು ತುಂಬಾ ಒಳ್ಳೇದು. ಅವನು ಇನ್ನೊಂದಿಷ್ಟು ಕಾಟ ಕೊಡಲಿ. ಆ ನಾಯಿ ಇದಕ್ಕೇ ಯೋಗ್ಯಳು.’

‘ಲಾರ್ಸ್, ನಿಮಗೂ ಮತ್ತು ಎಮಿಲಿಗೂ ಹೊಂದಾಣಿಕೆಯಾಗಲಿಲ್ಲ, ನೀವು ಬೇರೆಯಾದಿರಿ ಎನ್ನುವುದು ಬೇರೆ ವಿಷಯ. ಆದರೆ ನೀವು ಪರಸ್ಪರ ದ್ವೇಷವನ್ನು ಬೆಳೆಸಬಾರದು. ಅವಳಿಗೆ ನಿಮ್ಮ ಸಹಾಯದ ಅವಶ್ಯಕತೆಯಿದೆ. ಎಷ್ಟಾದರೂ ನೀವು ಅವಳೊಂದಿಗೆ ಐದು ವರ್ಷ ಇದ್ದಿರಿ.’

‘ಅವಳಿಗೆ ನನ್ನಿಂದ ಏನೂ ಸಹಾಯ ಸಿಗಲ್ಲ... ನಿನಗೇಕೆ ಅವಳ ಬಗ್ಗೆ ಇಷ್ಟು ಸಹಾನುಭೂತಿ?’

‘ಏಕೆಂದರೆ ನಾವಿಬ್ಬರು ಒಂದೇ ದೋಣಿಯಲ್ಲಿ ಕೂತಿದ್ದೇವೆ... ನೀವು ನನ್ನಿಂದ ಸಾಕಷ್ಟು ವಿಷಯಗಳನ್ನು ಮರೆಮಾಚಿದ್ದೀರಿ?’

‘ನಾನೇನೂ ಮರೆಮಾಚಿಲ್ಲ. ನನಗೆ ನಿನ್ನ ಹಾಗೆ ವಟಗುಟ್ಟುವ ಅಭ್ಯಾಸವಿಲ್ಲ.’

‘ಇಪ್ಪತ್ತೆರಡನೆಯ ವಯಸ್ಸಿನಲ್ಲಿ ನಿಮಗೆ ಆಕ್ಸಿಡೆಂಟ್ ಆಗಿ ನಿಮ್ಮೆರಡೂ ಟೆಸ್ಟೀಸ್ ಹಾಳಾಗಿದ್ದು, ಬಾಲ್ಯದಲ್ಲಿ ಮೂರು ವರ್ಷ ಒಂದು ಫೋಸ್ಟರ್ ಹೋಮ್‌ನಲ್ಲಿ ಬೆಳೆದಿದ್ದನ್ನು ನೀವು ನನ್ನಿಂದ ಮರೆಮಾಚಿಲ್ಲವೇ?’

‘ಬಾಯಿ ಮುಚ್ಚು...! ಇನ್ನು ಒಂದು ಶಬ್ದವನ್ನೂ ಹೇಳಬಾರದು’ ಅವನು ನನಗೆ ಬೆರಳು ತೋರಿಸುತ್ತಾ ಕಿರುಚಿದ, ‘ನನ್ನ ಮೇಲೆ ಸದಾ ಸುಳ್ಳು ಆರೋಪ ಹೊರಿಸ್ತೀಯ. ನನಗೆ ತಿಳಿಯದಂತೆ ಯಾರು ಯಾರನ್ನು ಭೇಟಿಯಾಗ್ತೀಯೋ... ಎಲ್ಲರಿಗೂ ನನ್ನ ಬಗ್ಗೆ ಕೆಟ್ಟದ್ದನ್ನು ಹೇಳ್ತಾ ಅಲೀತೀಯ... ನನ್ನ ವಿರುದ್ಧ ಷಡ್ಯಂತ್ರ ಮಾಡ್ತೀಯ.’

ನನಗೆ ಆಶ್ಚರ್ಯವಾಯಿತು...‘ಲಾರ್ಸ್... ನಿಮಗೇಕೆ ಇಷ್ಟು ಸಿಟ್ಟು ಬರ್ತಾ ಇದೆ...? ನನ್ನ ಬಗ್ಗೆ ಇಂಥ ಆರೋಪವನ್ನು ಏಕೆ ಮಾಡ್ತಿದ್ದೀರಿ? ನಾನು ನಿಮ್ಮ ಬೆನ್ನ ಹಿಂದೆ ಯಾರಿಗೂ ನಿಮ್ಮ ಬಗ್ಗೆ ಕೆಟ್ಟದ್ದಾಗಿ ಮಾತನಾಡಿಲ್ಲ.’

‘ನೀನು ನನ್ನ ಮದರ್ ಬಳಿಗೆ ಹೋಗಲ್ವ... ನನ್ನ ಬಗ್ಗೆ ಚಾಡಿ ಹೇಳಲು...?’

ನಾನು ಉತ್ತರಿಸದಾದೆ. ಒತ್ತಿ ಬಂದ ಕಂಠದಿಂದ ಹೇಳಿದೆ, ‘ನೀವು ನನಗೆ ಹೊಡೆದಾಗ, ಅವರ ಬಳಿಗೆ ಹೋಗ್ತೀನಿ; ನೀವೇಕೆ ಹೀಗೆ ಹೊಡೀತೀರಿ ಅಂತ ಕೇಳೋದಕ್ಕೆ ಹೋಗ್ತೀನಿ... ಲಾರ್ಸ್, ನನ್ನ ಮಾತನ್ನು ಪೂರಾ ಕೇಳಿ...’

‘ನಾನೇನೂ ಕೇಳಬೇಕಿಲ್ಲ...’

‘ಲಾರ್ಸ್, ನಿಮ್ಮಿಂದ ಮಗುವಾಗದಿದ್ದರೆ ಚಿಂತೆಯಿಲ್ಲ. ನೀವು ಜೋಶ್‌ನನ್ನು ನಿಮ್ಮ ಮಗನೆಂದು ತಿಳಿಯಿರಿ...’

‘ಓಹೋ... ನಿನ್ನ ಮಗನನ್ನು ಇಲ್ಲಿಗೆ ಕರೆದು ಕೊಂಡು ಬರಲು ಹೊಸ ಪ್ಲಾನ್ ಮಾಡ್ತಿದ್ದೀಯ?’

‘ನಿಮಗೆ ಮಗುವಾಗುವುದಿಲ್ಲ. ನಿಮಗೆ ಮಗನನ್ನು ಕೊಡ್ತಿದ್ದೀನಿ. ಅಯ್ಯೋ ದೇವರೇ, ಇವರಿಗೆ ಒಳ್ಳೆಯ ಬುದ್ಧಿಯನ್ನು ಕೊಡು...’ ನಾನು ಬಡಬಡಿಸಿದೆ.

‘ನೀಚ ಹೆಣ್ಣೇ, ಗೂಬೆ ಹೆಣ್ಣೇ...’ ಎಂದು ಲಾರ್ಸ್ ಛಟೀರನೆ ನನ್ನ ಕಪಾಳಕ್ಕೆ ಹೊಡೆದ. ನಂತರ ಡೈನಿಂಗ್ ಟೇಬಲ್ ಮೇಲಿದ್ದ ರಾಯತದ ಪಾತ್ರೆಯನ್ನು ಎತ್ತಿಕೊಂಡು ಅದನ್ನೆಲ್ಲ ನನ್ನ ತಲೆಯ ಮೇಲೆ ಸುರಿದ. ನನ್ನ ತಲೆ ಕೂದಲು, ಮುಖ ಮತ್ತು ಬಟ್ಟೆಗಳು ಮಸಾಲೆ ಮೊಸರಿನಿಂದ ಒದ್ದೆಯಾದವು. ‘ನಾನು ಇದೀಗ ತಾನೇ ಮನೆಗೆ ಬಂದಿದ್ದೇನೆ. ನನಗೆ ಪ್ರೀತಿ ತೋರದೆ, ನನ್ನನ್ನು ಸತ್ಕರಿಸದೆ ನನ್ನ ಹತ್ರ ಜಗಳ ಮಾಡ್ತಿದ್ದೀಯ. ನಿನ್ನ ಮಗನನ್ನು ಇಲ್ಲಿಗೆ ಕರೆತರುವ ಬಗ್ಗೆ ಪದೇಪದೇ ಹೇಳಿ ನನ್ನ ತಲೆಯನ್ನು ತಿನ್ತಿದ್ದೀಯ, ನಾಯಿ’ ಎಂದು ಲಾರ್ಸ್ ಗರ್ಜಿಸಿದ.

ಲಾರ್ಸ್ ತನ್ನ ತಪ್ಪಿಟ್ಟುಕೊಂಡು ನನ್ನನ್ನು ಗದರಿಸಿದ... ವಾಹ್! ನನಗೆ ಅತೀವ ಸಿಟ್ಟು ಬಂದು, ‘ಲಾರ್ಸ್!’ ಎಂದು ಕಿರುಚಿದೆ. ಆದರೆ ಆಗ ಅತ್ತೆ ಹೇಳಿದ್ದ, ‘ಲಾರ್ಸ್‌ಗೆ ಸಿಟ್ಟು ಬಂದಾಗ ಅವನ ಎದುರಿಗೆ ಇರಬೇಡ’ ಎಂಬ ಮಾತು ನೆನಪಾಯಿತು. ನಾನು ಸಿಟ್ಟಿನಿಂದ ಏದುಸಿರು ಬಿಡುತ್ತಿದ್ದೆ. ಅವನೊಂದಿಗೆ ಜಗಳ ಮಾಡುವುದನ್ನು ಬಿಟ್ಟು ಹೊರಗೆ ಹೋದೆ. ಆದರೆ ಹೋಗುವಾಗ, ‘ನೀವು ಮನುಷ್ಯನ ಚರ್ಮದಲ್ಲಿ ಅಡಗಿದ ತೋಳ!’ ಎಂದು ನಿಂದಿಸಿದೆ.

ರಾತ್ರಿಯ ಒಂಬತ್ತು ಗಂಟೆಯಾಗಿತ್ತು. ನನ್ನ ಮನಃಸ್ಥಿತಿ ತುಂಬಾ ಹದಗೆಟ್ಟಿತ್ತು. ನಾನು ಲಜ್ಜೆಯನ್ನು ತ್ಯಜಿಸಿ ರಸ್ತೆಯಲ್ಲಿ ಹುಚ್ಚಿಯಂತೆ ಹೋಗುತ್ತಿದ್ದೆ. ಡ್ಯಾನಿಶ್ ಮಹಿಳೆಯೊಬ್ಬಳ ಗಮನ ನನ್ನ ಮೇಲೆ ಬಿತ್ತು.

‘ಏನಾಯ್ತು? ಯಾಕೆ ಅಳ್ತಿದ್ದೀಯ?’ ಅವಳು ವಿಚಾರಿಸಿದಳು.

ನನ್ನ ರೋದನ ಮತ್ತೂ ಹೆಚ್ಚಿತು. ನನ್ನ ಭಾವನೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳದಾದೆ. ಅವಳೆದುರು ಎಲ್ಲವನ್ನೂ ಕಕ್ಕಿದೆ.

‘ನಡಿ, ಪೊಲೀಸ್ ಸ್ಟೇಷನ್‌ಗೆ ಹೋಗೋಣ...’ ಎಂದಳು ಅವಳು.

ನಾನು ಎಷ್ಟು ಆವೇಶದಲ್ಲಿದ್ದೆನೆಂದರೆ, ಅವಳೊಂದಿಗೆ ಪೊಲೀಸ್ ಸ್ಟೇಷನ್‌ಗೆ ಹೋದೆ. ಅನ್ಯಾಯವನ್ನು ಎಲ್ಲಿಯವರೆಗೆ ಅಂತ ಸಹಿಸುವುದು? ನನ್ನ ಪತಿ ನನಗೆ ಹೊಡೆಯುತ್ತಾನೆ ಎಂದು ರಿಪೋರ್ಟ್ ಬರೆಸಿದೆ. ಕರ್ತವ್ಯದಲ್ಲಿದ್ದ ಪೊಲೀಸಿನವನು ನನ್ನ ಶರೀರವನ್ನು ನೋಡುತ್ತಾ ಹೇಳಿದ, ‘ಎಲ್ಲಿ ಹೊಡೆದ? ಸಾಕ್ಷಿ ಏನು? ಪರಚಿದ್ದು ಇದ್ದರೆ ತೋರಿಸಿ.’

‘ನನ್ನ ಬಟ್ಟೆ ಮತ್ತು ತಲೆಗೂದಲುಗಳಿಗೆ ಹತ್ತಿದ ಮೊಸರನ್ನು ನೋಡಿ. ಮುಖದ ಮೇಲಿದ್ದ ಮೊಸರನ್ನು ಒರೆಸಿಕೊಂಡಿದ್ದೇನೆ.’ ನಾನು ಅವನಿಗೆ ನನ್ನ ಬಟ್ಟೆ ಮತ್ತು ತಲೆಗೂದಲುಗಳನ್ನು ತೋರಿಸಿದೆ.

‘ಇಂಡಿಯನ್ ಕರಿ?’ ಅವನು ಕೇಳಿದ, ‘ಸುವಾಸನೆ ಬರ್ತಿದೆ.’

‘ಇದನ್ನು ತಗೊಂಡು ನಿನಗೇನಾಗಬೇಕಿದೆ’, ಡ್ಯಾನಿಶ್ ಮಹಿಳೆ ಪೊಲೀಸನ ಮೇಲೆ ರೇಗಿದಳು, ‘ನೀನು ನಿನ್ನ ಕೆಲಸ ಮಾಡು.’

ಪೊಲೀಸಿನವ ನನ್ನಿಂದ ಲಾರ್ಸ್‌ನ ಫೋನ್ ನಂಬರ್ ಪಡೆದು ಅವನಿಗೆ ಫೋನ್ ಮಾಡಿದ. ಫೋನ್‌ನಲ್ಲಿಯೇ ಅವನ ಹೇಳಿಕೆಯನ್ನು ಪಡೆದು, ನಂತರ ನನಗೆ ಹೇಳಿದ, ‘ಅವಳು ನನ್ನನ್ನು ಕ್ಷಮಿಸಲಿ, ನಾನು ಸಿಟ್ಟಿನ ಭರದಲ್ಲಿದ್ದೆ’ ಎಂದು ಅವರು ಹೇಳುತ್ತಿದ್ದಾರೆ. ಈಗ ನೀವು ಮನೆಗೆ ಹೋಗಿ, ಇನ್ನು ಅವರು ಹೊಡೆಯುವುದಿಲ್ಲ. ಅವರಿಗೆ ಒಂದು ಅವಕಾಶವನ್ನು ಕೊಡಿ. ಒಂದು ವೇಳೆ ಮತ್ತೆ ಹೊಡೆದರೆ, ನಮಗೆ ತಿಳಿಸಿ... ನಾವು ಅವರನ್ನು ಜೈಲಿಗೆ ಹಾಕ್ತೀವಿ.’

ನಾನು ಮನೆಗೆ ಬಂದೆ. ಅಂದು ನನಗೆ, ಈ ಯುದ್ಧದಲ್ಲಿ ನಾನು ಒಂಟಿ, ನನ್ನೊಂದಿಗೆ ಯಾರೂ ಇಲ್ಲ ಎಂದು ಅನ್ನಿಸಿತು. ರಾತ್ರಿಯ ಮೌನದಲ್ಲಿ ನನ್ನ ಬಿಕ್ಕಳಿಕೆ ತೀವ್ರವಾಯಿತು, ಅದನ್ನು ಕೇಳುವವರು ಇರಲಿಲ್ಲ. ಅಂಧಕಾರದಲ್ಲಿ ನನ್ನ ವೇದನೆಯನ್ನು ಅರಿತುಕೊಳ್ಳುವವರು ಇರಲಿಲ್ಲ.

ಈ ಮೊದಲು ಸಹ ನಮ್ಮ ನಡುವೆ ಜಗಳವಾಗುತ್ತಿತ್ತು. ಹೊಡೆತ ಬಡಿತ ಸಹ ನಡೆಯುತ್ತಿತ್ತು, ಆದರೆ ನಾವು ಒಬ್ಬರಿಗೊಬ್ಬರು ಕ್ಷಮೆಯಾಚಿಸಿ, ಒಪ್ಪಂದ ಮಾಡಿಕೊಳ್ಳುತ್ತಿದ್ದೆವು. ನಂತರ ಎಲ್ಲವೂ ಸಾಮಾನ್ಯವಾಗುತ್ತಿತ್ತು. ನಾವು ಹೊರಗಡೆ ಸುತ್ತಾಡಲು ಹೋಗುತ್ತಿದ್ದೆವು, ಮನಸಾರೆ ಹರಟುತ್ತಿದ್ದವು. ಪರಸ್ಪರ ಉಡುಗೊರೆಗಳನ್ನು ಹಂಚಿಕೊಳ್ಳುತ್ತಿದ್ದೆವು. ಆದರೆ ನಾನು ಅವನ ವಿರುದ್ಧ ಪೊಲೀಸ್ ಸ್ಟೇಷನ್‌ನಲ್ಲಿ ರಿಪೋರ್ಟ್ ಬರೆಸಿದ ದಿನದಿಂದ, ಹೊಂದಾಣಿಕೆ ಮಾಡಿಕೊಳ್ಳುವ ವಿಧಾನಕ್ಕೆ ಬ್ರೇಕ್ ಬಿತ್ತು. ಲಾರ್ಸ್‌ನ ಮನಸ್ಸಿನಲ್ಲಿ ನನ್ನ ಬಗ್ಗೆ ಹೊಟ್ಟೆಕಿಚ್ಚು ಹುಟ್ಟಿತು. ಅವನು ನನ್ನಿಂದ ಪ್ರತ್ಯೇಕವಾಗಿರುತ್ತಾ, ತನ್ನಲ್ಲೇ ಮುದುಡಿಕೊಂಡು ಇರುತ್ತಿದ್ದ. ನನ್ನ ಉಪಸ್ಥಿತಿ ಸಹ ಅವನಿಗೆ ಅಪ್ರಿಯವಾಗುತ್ತಿತ್ತು. ಅವನು ಫುಟ್‌ಬಾಲ್ ಮ್ಯಾಚ್‌ನಲ್ಲಿ, ಪತ್ರಿಕೆಗಳಲ್ಲಿ, ಮೊಬೈಲ್ ಸ್ಕ್ರೀನ್‌ನಲ್ಲಿ ಮುಳುಗಿರುತ್ತಿದ್ದ. ನಾನು ಏನಾದರೂ ಹೇಳಿದರೆ, ನನಗೆ ಉತ್ತರಿಸುವುದಕ್ಕೆ ಬದಲು ಅಂತರ್ಮುಖಿಯಾಗುತ್ತಿದ್ದ. ಅಕಸ್ಮಾತ್ ನನ್ನೊಂದಿಗೆ ಮಾತನಾಡಿದರೆ, ಜಗಳವಾಡುತ್ತಿದ್ದ, ಹೊಡೆಯುತ್ತಿದ್ದ.

ಅಬ್ರಾಹಮ್ ನನಗೆ ಮಾನಸಿಕ ಯಾತನೆಯನ್ನು ಕೊಡುತ್ತಿದ್ದ. ಅವನ ಲೈಂಗಿಕ ಗೀಳು ಮಾತ್ರ ಕ್ಲೇಶಕ್ಕೆ ಕಾರಣವಾಗಿತ್ತು. ಅವನೆಂದೂ ನನ್ನ ಮೇಲೆ ಕೈ ಮಾಡಲಿಲ್ಲ, ನಿಂದಿಸಲಿಲ್ಲ. ನಾನೇ ಅವನ ಬಗ್ಗೆ ಕಿರುಚುತ್ತಿದ್ದೆ, ನಿಂದಿಸುತ್ತಿದ್ದೆ. ಇಲ್ಲಿ ಲಾರ್ಸ್ ನನಗೆ ಕೆಟ್ಟದಾಗಿ ನಿಂದಿಸುತ್ತಿದ್ದ, ನನ್ನ ಮೇಲೆ ಕೈ ಮಾಡುತ್ತಾ ಹೊಡೆಯುತ್ತಿದ್ದ, ಇದು ಅತ್ಯಂತ